# ನಿಮ್ಮೊಡನೆ

## ಪೇಯಿಂಗ್ ಗೆಸ್ಟ್ ವ್ಯವಸ್ಥೆ ಆಗಿರಲಿ ಪಾರದರ್ಶಕ ಕಡ್ಡಾಯವಾಗಿ ಹೊಂದಿರಲಿ ಸುರಕ್ಷತಾ ಕವಚ

**ಪಿ.ಜಿ.ಗಳಿಗೆ ಇರುವ ಅಪಾರ ಬೇಡಿಕೆ ಅನಧಿಕೃತ ವ್ಯವಸ್ಥೆ ರೂಪುಗೊಳ್ಳಲು ಕಾರಣವಾಗಿದೆ. ಅನಧಿಕೃತ ಪಿ.ಜಿ.ಗಳನ್ನು ಕಾನೂನಿನ ತೆಕ್ಕೆಗೆ ತರುವ ಬಗ್ಗೆ ಪ್ರಯತ್ನಗಳು ಆಗಾಗ ನಡೆಯುತ್ತವೆ. ದುರಂತ ನಡೆದಾಗ ತೀವ್ರತೆ ಪಡೆದುಕೊಳ್ಳುವ ಸುಧಾರಣೆಯ ಪ್ರಯತ್ನಗಳು, ನಂತರದ ದಿನಗಳಲ್ಲಿ ತಣ್ಣಗಾಗುತ್ತವೆ.**

ಬೆಂಗಳೂರಿನ ಕೋರಮಂಗಲದ ಮಹಿಳಾ ಪೇಯಿಂಗ್ ಗೆಸ್ಟ್ (ಪಿ.ಜಿ.) ಕಟ್ಟಡಕ್ಕೆ ನುಗ್ಗಿದ ವ್ಯಕ್ತಿಯೊಬ್ಬ ಯುವತಿಯೊಬ್ಬಳ ಕತ್ತು ಸೀಳಿ ಹತ್ಯೆ ಮಾಡಿದ್ದಾನೆ. ಚಾಕು ಹಿಡಿದು ಪಿ.ಜಿ.ಯ ಮೂರನೇ ಮಹಡಿ ಪ್ರವೇಶಿಸಿರುವ ವ್ಯಕ್ತಿ ಯುವತಿಯನ್ನು ದಾರುಣವಾಗಿ ಇರಿದು ಕೊಂದಿದ್ದಾನೆ. ಸೂಕ್ತ ಭದ್ರತಾ ವ್ಯವಸ್ಥೆಯಿಲ್ಲದ ಕಾರಣ ಆರೋಪಿ ಸುಲಭವಾಗಿ ಕೃತ್ಯ ಎಸಗಿ ಪರಾರಿಯಾಗಿದ್ದಾನೆ ಎನ್ನಲಾಗಿದೆ.

ಉದ್ಯೋಗವನ್ನು ಹುಡುಕಿಕೊಂಡು ಬರುವ ತರುಣ ತರುಣಿಯರ ಪಾಲಿಗೆ ಬೆಂಗಳೂರು ಮಹಾನಗರ ಅವಕಾಶಗಳ ಅಕ್ಷಯಪಾತ್ರೆಯಂತೆ ಕಾಣಿಸುತ್ತಿದೆ. ನಾಡಿನ ವಿವಿಧ ಭಾಗಗಳಿಂದ ಮಾತ್ರವಲ್ಲದೆ, ದೇಶದ ವಿವಿಧ ಭಾಗಗಳಿಂದಲೂ ಉದ್ಯೋಗಾಕಾಂಕ್ಷಿಗಳು ಬೆಂಗಳೂರಿಗೆ ಧಾವಿಸುತ್ತಿದ್ದಾರೆ. ವಿದ್ಯಾಭ್ಯಾಸದ ಕಾರಣದಿಂದಲೂ ರಾಜಧಾನಿಗೆ ಬರುವವರ ಪ್ರಮಾಣ ದೊಡ್ಡದಿದೆ. ಹೀಗೆ ಬರುವ ಕನಸು ಕಂಗಳ ಹುಡುಗ ಹುಡುಗಿಯರಿಗೆ ಪಿ.ಜಿ.ಗಳೇ ಆಶ್ರಯತಾಣಗಳು. ಬಾಡಿಗೆ ಮನೆಗಳನ್ನು ಮಾಡಿಕೊಂಡು, ಅಡುಗೆಯನ್ನು ಮಾಡಿಕೊಳ್ಳುವ ವ್ಯವಸ್ಥೆ ರೂಪಿಸಿಕೊಳ್ಳುವುದು ಮಹಾನಗರದಲ್ಲಿ ಸುಲಭವಲ್ಲ. ಮನೆ ಮಾಡಿಕೊಂಡು ಬದುಕುವುದು ಹಲವು ಜವಾಬ್ದಾರಿಗಳಿಗೂ ಕಾರಣವಾಗುತ್ತದೆ. ಹಾಗಾಗಿ, ಕಡಿಮೆ ವೆಚ್ಚ ಹಾಗೂ ಕನಿಷ್ಠ ಜವಾಬ್ದಾರಿಯಲ್ಲಿ ಜೀವನ ನಿರ್ವಹಣೆ ಮಾಡಬಯಸುವ ಒಂಟಿಗರಿಗೆ ಪೇಯಿಂಗ್ ಗೆಸ್ಟ್ ಆಶ್ರಯ ಉತ್ತಮ ಆಯ್ಕೆ.

ಪಿ.ಜಿ.ಗಳಿಗೆ ಇರುವ ಅಪಾರ ಬೇಡಿಕೆ ಸಹಜವಾಗಿ ಹಲವು ಸಮಸ್ಯೆಗಳಿಗೂ ಕಾರಣವಾಗಿದೆ. ಪಿ.ಜಿ. ಪರಿಕಲ್ಪನೆಯೀಗ ಉದ್ಯಮದ ಸ್ವರೂಪ ಪಡೆದುಕೊಂಡಿದ್ದು, ತಮ್ಮ ಮನೆಗಳನ್ನು ಅತಿಥಿಗೃಹಗಳಾಗಿ ಪರಿವರ್ತಿಸಿಕೊಂಡು ಗಳಿಕೆ ಮಾರ್ಗ ಕಂಡುಕೊಂಡಿರುವ ಬೆಂಗಳೂರು ನಿವಾಸಿಗಳ ಸಂಖ್ಯೆ ದೊಡ್ಡದಿದೆ. ಉನ್ನತ ಶಿಕ್ಷಣ ಸಂಸ್ಥೆಗಳು ಇರುವ ಬಡಾವಣೆಗಳಲ್ಲಂತೂ ಸಣ್ಣಪುಟ್ಟ ವಸತಿಗೃಹಗಳು 'ಪಿ.ಜಿ.' ಬೋರ್ಡು ತಗುಲಿಸಿಕೊಂಡಿರುವುದಿದೆ. ಪಾಲಿಕೆಯ ನಿಯಮಗಳನ್ನು ಉಲ್ಲಂಘಿಸಿ ಕಟ್ಟಡಗಳನ್ನು ನಿರ್ಮಿಸಿ ಪಿ.ಜಿ. ನಡೆಸುತ್ತಿರುವವರೂ ಇದ್ದಾರೆ.

ಪಿ.ಜಿ.ಗಳನ್ನು ನಡೆಸುವುದಕ್ಕೆ ಸರ್ಕಾರದ ಪರವಾನಗಿ ಅಗತ್ಯ. ಆದರೆ, ಅನೇಕ ಪಿ.ಜಿ.ಗಳು ಅನುಮತಿ ಪಡೆಯದೆಯೇ ಕಾರ್ಯನಿರ್ವಹಿಸುತ್ತಿವೆ. ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸದ ಹಾಗೂ ಭದ್ರತಾ ವ್ಯವಸ್ಥೆಯನ್ನು ರೂಪಿಸಿಕೊಳ್ಳದ ಪಿ.ಜಿ.ಗಳೂ ಇವೆ. ಪಿ.ಜಿ.ಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕೆಲವು ವಸತಿ ಪ್ರದೇಶಗಳಲ್ಲಿ ಅಲ್ಲಿನ ಜನ ಕಿರಿಕಿರಿ ಅನುಭವಿಸುತ್ತಿರುವ ಹಾಗೂ ಆ ಪರಿಸರದಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ತರುವ ಚಟುವಟಿಕೆಗಳು ನಡೆಯುತ್ತಿವೆ ಎನ್ನುವ ದೂರುಗಳು ದಾಖಲಾಗಿರುವ ಪ್ರಕರಣಗಳೂ ಇವೆ. ಸಿಸಿಟಿವಿ ಕ್ಯಾಮೆರಾಗಳಿಲ್ಲದ ಪಿ.ಜಿ. ಮಾಲೀಕರಿಗೆ ಪೊಲೀಸರು ನೋಟಿಸ್ ನೀಡಿರುವ ಘಟನೆಗಳೂ ವರದಿಯಾಗಿವೆ.

ಪಿ.ಜಿ. ಮಾಲೀಕರ ಒಕ್ಕೂಟದ ಪ್ರಕಾರ ಬೆಂಗಳೂರಿನಲ್ಲಿ 20 ಸಾವಿರಕ್ಕೂ ಹೆಚ್ಚಿನ ಪಿ.ಜಿ.ಗಳು ಕಾರ್ಯ ನಿರ್ವಹಿಸುತ್ತಿದ್ದು, ಅವುಗಳಲ್ಲಿ 17 ಲಕ್ಷಕ್ಕೂ ಹೆಚ್ಚಿನ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದಾರೆ. ಅನಧಿಕೃತ ಪಿ.ಜಿ.ಗಳ ಸಂಖ್ಯೆಯನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಫಲಾನುಭವಿಗಳ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ. ಕೊರೊನಾ ನಂತರವಂತೂ ಪಿ.ಜಿ.ಗಳ ಸಂಖ್ಯೆ ತೀವ್ರವಾಗಿ ಹೆಚ್ಚಾಗಿದೆ. ಈ ಪೀಜಿಗಳು ತಿಂಗಳಿಗೆ ನಾಲ್ಕು ಸಾವಿರದಿಂದ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ಶುಲ್ಕ ಪಡೆದು ವಿವಿಧ ಸೇವೆಗಳನ್ನು ಒದಗಿಸುತ್ತಿವೆ. ಆದರೆ, ಮಹಾನಗರ ಪಾಲಿಕೆಯ ಅನುಮತಿ, ಸಿಸಿಟಿವಿ ಅಳವಡಿಕೆ, ಭದ್ರತಾ ಸಿಬ್ಬಂದಿ ಹೊಂದಿರುವಿಕೆ ಹಾಗೂ ವಾಸಿಸುವವರ ಗುರುತು ಪರಿಚಯದ ದಾಖಲೆಗಳನ್ನು ಕಡ್ಡಾಯವಾಗಿ ಪಡೆದಿರಬೇಕೆನ್ನುವಂತಹ ನಿಯಮಗಳನ್ನು ಎಲ್ಲ ಪಿ.ಜಿ.ಗಳು ಪಾಲಿಸುತ್ತಿಲ್ಲ.

ಮಹಾನಗರಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಪಿ.ಜಿ.ಗಳಿಗೆ ವಿಶೇಷ ಮಹತ್ವವಿದೆ. ವಿದ್ಯಾರ್ಥಿಗಳು ಹಾಗೂ ವೃತ್ತಿಜೀವನದ ಆರಂಭಿಕ ಹಂತದಲ್ಲಿರುವವರು ಗೌರವದಿಂದ ಜೀವನ ನಡೆಸಲು ಪಿ.ಜಿ.ಗಳು ಅವಕಾಶ ಕಲ್ಪಿಸುತ್ತವೆ. ಹೆಣ್ಣುಮಕ್ಕಳಿಗೆ ಪಿ.ಜಿ.ಗಳು ನೀಡುವ ಆತ್ಮವಿಶ್ವಾಸ ಸುಲಭ ವ್ಯಾಖ್ಯಾನಕ್ಕೆ ನಿಲುಕದಂತಹದ್ದು. ಪೋಷಕರನ್ನು ಬಿಟ್ಟು ನಗರಗಳಿಗೆ ಬಂದು ಸ್ವಂತ ಬದುಕು ಕಟ್ಟಿಕೊಳ್ಳಲು ಹಂಬಲಿಸುವ ಲಕ್ಷಾಂತರ ಹೆಣ್ಣುಮಕ್ಕಳು ಪಿ.ಜಿ.ಗಳಲ್ಲಿ ಆಶ್ರಯ ಕಂಡುಕೊಂಡಿದ್ದಾರೆ. ಈ ವ್ಯವಸ್ಥೆ ಉದ್ಯಮದ ಸ್ವರೂಪವನ್ನು ಪಡೆದುಕೊಂಡಿರುವುದೂ ಸ್ವಾಗತಾರ್ಹ ಬೆಳವಣಿಗೆಯೇ. ಆದರೆ, ಈ ಎಲ್ಲ ಚಟುವಟಿಕೆಗಳನ್ನು ಕಾನೂನಿನ ನಿಯಂತ್ರಣಕ್ಕೆ ತರದಿರುವುದು ವ್ಯವಸ್ಥೆಯಲ್ಲಿ ಲೋಪದೋಷಗಳು ಎದ್ದುಕಾಣಲು ಕಾರಣವಾಗಿದೆ.

ಅನಧಿಕೃತ ಪಿ.ಜಿ.ಗಳು ಹಾಗೂ ಅವುಗಳಲ್ಲಿ ಭದ್ರತಾವ್ಯವಸ್ಥೆಯ ಕೊರತೆಯ ದೂರುಗಳು ಇಂದಿನವೇನಲ್ಲ. 2016ರಲ್ಲಿ ಬೆಂಗಳೂರಿನ ಪಿ.ಜಿ.ಯೊಂದರಲ್ಲಿ ಅತ್ಯಾಚಾರ ನಡೆದಿತ್ತು. ಆ ಸಂದರ್ಭದಲ್ಲಿ, ಅನಧಿಕೃತ ಪಿ.ಜಿ.ಗಳನ್ನು ಕಾನೂನಿನ ತೆಕ್ಕೆಗೆ ತರುವ ಬಗ್ಗೆ ಪ್ರಯತ್ನಗಳು ನಡೆದಿದ್ದವು. ದುರಂತ ನಡೆದಾಗ ತೀವ್ರತೆ ಪಡೆದುಕೊಳ್ಳುವ ಸುಧಾರಣೆಯ ಪ್ರಯತ್ನಗಳು, ನಂತರದ ದಿನಗಳಲ್ಲಿ ತಣ್ಣಗಾಗುತ್ತವೆ. ಪ್ರಸ್ತುತ ಕೋರಮಂಗಲದಲ್ಲಿ ನಡೆದಿರುವ ಯುವತಿಯ ಹತ್ಯೆ ಕೂಡ ಪಿ.ಜಿ. ವ್ಯವಸ್ಥೆಯ ಲೋಪದೋಷಗಳನ್ನು ಬೆಟ್ಟು ಮಾಡಿ ತೋರಿಸುತ್ತಿದೆ. ಸುಧಾರಣೆ ಈಗಲಾದರೂ ಆಗಬೇಕಾಗಿದೆ.

■ ರಘುನಾಥ ಚ.ಹ.




ಈಶ್ವರ್